## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.2/2024

| | | | |
|---|---|---|---|
| ಸಾಕ್ಷಿದಾರರ ಹೆಸರು | ಸಂತೋಷ ಹಿರೇಮಠ | ಸಿಡಬ್ಲ್ಯೂ | 1 |
| ತಂದೆ ಹೆಸರು | ಸಿದ್ದಯ್ಯ | ಪಿಡಬ್ಲ್ಯೂ | 1 |
| ವಯಸ್ಸು | 35 ವರ್ಷ | | |
| ಉದ್ಯೋಗ | ಅರ್ಚಕ | | |
| ವಾಸಸ್ಥಳ | ದಾಸನಕೊಪ್ಪ ತಾಃ ಶಿರಶಿ | | |

**ದಿಃ 18.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸದರಿ ಸಾಕ್ಷಿದಾರರ ಸಾಕ್ಷವನ್ನು ಭಾರತೀಯ ದಂಡ ಸಂಹಿತೆ ಕಲಂ.299 ರಡಿಯಲ್ಲಿ ದಾಖಲಸಿಸಕೊಳ್ಳಲಾಯಿತು.**

1). ನಾನು ಹಾವೇರಿಯಲ್ಲಿ 2007 ರಿಂದ 2016 ರವರೆಗೆ ವಾಸವಾಗಿದ್ದೇನು. ನಾನು ಹಾವೇರಿಯಲ್ಲಿರುವ ಜಯದೇವನಗರದಲ್ಲಿ ದಾನಮ್ಮ ದೇವಿ ದೇವಸ್ಥಾನದಲ್ಲಿ ಅರ್ಚಕನಾಗಿ ಕೆಲಸ ಮಾಡುತ್ತಿದ್ದೇನು. ನನಗೆ ಚಾ.ಸಾ-2,3,6 ರಿಂದ 10 ಇವರ ಪರಿಚಯ ಇರುತ್ತದೆ. ನಾನು ಹಾವೇರಿಯಲ್ಲಿ ಅರ್ಚಕನಾಗಿ ಕೆಲಸ ಮಾಡುವ ಹಾವೇರಿಯ ಜಯದೇವನಗರದಲ್ಲಿ ಇರುವಂತಹ ದಾನಮ್ಮ ದೇವಿ ದೇವಸ್ಥಾನಕ್ಕೆ ಅರ್ಚಕನಾಗಿ ಕೆಲಸ ಮಾಡಲು ಬೆಳಗಿನ 5 ರಿಂದ ಮಧ್ಯಾಹ್ನ 1-00 ಘಂಟೆಯವರೆಗೆ ಮತ್ತು ಸಾಯಂಕಾಲ 5-00 ರಿಂದ 9-00 ಘಂಟೆಯವರೆಗೆ ಕೆಲಸ ಮಾಡುತ್ತಿದ್ದೆ. ನಂತರ 9-00 ಘಂಟೆಯ ಬಳಿಕ ದೇವಸ್ಥಾನಕ್ಕೆ ಬೀಗ ಹಾಕಿ ನನ್ನ ಮನೆಗೆ ಹೋಗುತ್ತಿದ್ದೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಅಂದಾಜು 2016 ರಲ್ಲಿ ಜನೇವರಿ ತಿಂಗಳಲ್ಲಿ ಹಾವೇರಿಯ ಜಯದೇವನಗರದಲ್ಲಿ ಇರುವಂತಹ ನಾನು ಅರ್ಚಕನಾಗಿ ಕೆಲಸ ಮಾಡುಂವತಹ ದಾನಮ್ಮದೇವಿ ದೇವಸ್ಥಾನಕ್ಕೆ ಬೀಗ ಹಾಕಿಕೊಂಡು ಮಾರನೇ ದಿವಸ ನಾನು ದೇವಸ್ಥಾನಕ್ಕೆ ಬಂದು ನಾನು ಬೆಳಗಿನ ಜಾವ 5-00 ಘಂಟೆಗೆ ಬಂದು

ನೋಡಿದಾಗ ಸದರಿ ದೇವಸ್ಥಾನದ ಗೇಟಿನ ಬೀಗ ಒಡೆದಿರುವದು ಕಂಡು ಬಂದಿರುತ್ತದೆ. ದೇವಸ್ಥಾನದ ಒಳಗಡೆ ಹಾಲಿನಲ್ಲಿ ಕೆಲವು ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವದನ್ನು ಕಂಡು ಬಂದಿರುತ್ತೇನೆ. ಆ ಬಳಿಕ ಸದರಿ ಹಾಲಿನಲ್ಲಿ ಬಿದ್ದಂತಹ ವಸ್ತುಗಳನ್ನು ತೆಗೆದು ನೋಡದೇ ನಂತರ ಹಾವೇರಿಯ ಜಯದೇವನಗರಕ್ಕೆ ಸಂಬಂದಪಟ್ಟ ಪೊಲೀಸ ಠಾಣೆಗೆ ನಾನು ಅರ್ಚಕನಾಗಿ ಕೆಲಸ ಮಾಡುವಂತಹ ದೇವಸ್ಥಾನದ ಕುರಿತಾಗಿ ದಾನಮ್ಮ ದೇವಿ ದೇವಸ್ಥಾನದ ಅಧ್ಯಕ್ಷರಿಗೆ ನಾನು ಘಟನೆಯ ಕುರಿತಾಗಿ ತಿಳಿಸಿದ್ದೇನೆ.

2) ನಾನು ದೇವಸ್ಥಾನದ ಹೊರಗಡೆ ಬಂದು ನೋಡಿದಾಗ ದೇವಸ್ಥಾನದ ಒಳಗಡೆ ಇದ್ದ ಒಂದು ಕಬ್ಬಿಣದ ಅಲಮೇರಾವನ್ನು ಓಡೆದಿರುವದು ಕಂಡು ಬಂದಿರುತ್ತದೆ. ಸದರಿ ಅಲಮೇರಾದಲ್ಲಿ ಇದ್ದ ಒಟ್ಟು 5 ವಸ್ತುಗಳು ನಾನು ಪರಿಶೀಲನೆ ಮಾಡಿ ನೋಡಿದಾಗ ಆ ಅಲಮೇರಾದಲ್ಲಿ ಕಂಡು ಬಂದಿರುವದಿಲ್ಲ. ಆ ಬಳಿಕ ಘಟನೆಯ ಕುರಿತಾಗಿ ನಾನು ಹಾವೇರಿಯ ಶಹರ ಪೊಲೀಸ ಠಾಣೆಗೆ ಹೋಗಿ ಗಣಕೀಕೃತ ಪಿರ್ಯಾದಿಯನ್ನು ಕೊಟ್ಟಿದ್ದೇನೆ. ಸದರಿ ಪಿರ್ಯಾದಿಯ ದೃಢೀಕೃತ ನಕಲನ್ನು ಸಾಕ್ಷಿ ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಸದರಿ ನಿ.ಪಿ-1 ಪಿರ್ಂಕೂದಿಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಗೆ ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ನಿ.ಪಿ-2 ಎಂದು ಗುರುತಿಸಲಾಯಿತು. ನಿ.ಪಿ-2 ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿ ಇರುವದನ್ನು ಗುರುತಿಸುತ್ತಾರೆ. ಆ ಬಳಿಕ ಪೊಲೀಸರು ಈ ಪ್ರಕರಣದ ಕುರಿತಂತೆ ತನಿಖೆ ನಡೆಸಿ ತನಿಖೆಯಲ್ಲಿ ನಮ್ಮ ದಾನಮ್ಮ ದೇವಿ ದೇವಸ್ಥಾನಲ್ಲಿ ಕಳ್ಳತನವಾದ ಎಲ್ಲ ಸ್ವತ್ತುಗಳು ಸಿಕ್ಕಿರುತ್ತವೆ . ಸದರಿ ಸ್ವತ್ತುಗಳು ನಮ್ಮ ದೇವಸ್ಥಾನದಲ್ಲಿ ಕಳ್ಳತನವಾಗಿ 2 ತಿಂಗಳ ಬಳಿಕ ಸಿಕ್ಕಿರುತ್ತೇವೆ. ಕಳ್ಳತನ ಮಾಡಿದ ವ್ಯಕ್ತಿಗಳನ್ನು ಪೊಲೀಸರು ನನಗೆ ಪೊಲೀಸ ಠಾಣೆಯಲ್ಲಿ

ತೋರಿಸಿರಬಹುದು, ಆದರೆ ಈಗ ಅವರನ್ನು ಗುರುತಿಸಲು ಸಾಧ್ಯವಾಗುವದಿಲ್ಲ. ಈ ಪ್ರಕರಣದಲ್ಲಿ ತಲೆಮರಸಿಕೊಂಡಿರುವ ಆರೋಪಿಯನ್ನು ಗುರುತಿಸಬಲ್ಲೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.

ಸಿ.ಡಬ್ಲೂ-1, ಪಿ.ಡಬ್ಲೂ-1